ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಜನವರಿ 13, 2015

ಪತ್ರಿಕಾ ಪ್ರಕಟಣೆ

# ಮಾಜಿ ಶಾಸಕ ಪ್ರೊ ಚಿಕ್ಕಬೋರಯ್ಯ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

ಬೆಂಗಳೂರು, ಜನವರಿ 13 :

ಮೈಸೂರಿನ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಪ್ರೊ ಪಿ. ಎಂ. ಚಿಕ್ಕಬೋರಯ್ಯ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಅನೇಕ ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿದ್ದ ಪ್ರೊ ಚಿಕ್ಕಬೋರಯ್ಯ ಅವರು ಮಾನವೀಯ ಮೌಲ್ಯಗಳ ಖನಿಯಾಗಿದ್ದರು. ಓದುವ ಮಕ್ಕಳಿಗೆ ಎಂದೂ ಅನ್ನದ ಕೊರತೆ ಎದುರಾಗಬಾರದೆಂಬ ಸದುದ್ದೇಶ ಹೊಂದಿದ್ದ ಅವರು ಹಲವೆಡೆ ಅನ್ನದಾನದ ವ್ಯವಸ್ಥೆ ಮಾಡಿದ್ದರು. ಪ್ರೊ ಚಿಕ್ಕಬೋರಯ್ಯ ಅವರಲ್ಲಿನ ಈ ಸಾಮಾಜಿಕ ಕಳಕಳಿ ಮತ್ತು ಕಾಳಜಿ ಮೆಚ್ಚುವಂತಹುದ್ದಾಗಿತ್ತು. ಸದಾ ಪ್ರೀತಿಯ ಕಾರಂಜಿಯಾಗಿದ್ದ ಶ್ರೀ ಚಿಕ್ಕಬೋರಯ್ಯ ಅವರ ಅನುಕರಣ ಯೋಗ್ಯ ಗುಣಗಳು ನನ್ನನ್ನು ಜನನಾಯಕನನ್ನಾಗಿ ರೂಪಿಸಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಪ್ರೊ ಚಿಕ್ಕಬೋರಯ್ಯ ಅವರ ಆತ್ಮಕ್ಕೆ ಶಾಂತಿ ದೊರೆಯಲಿ, ಶ್ರೀಯುತರ ಅಗಲಿಕೆಯಿಂದ ಉಂಟಾಗಿರುವ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

************

ಡಿ ಪಿ ಎಂ